# ಬುದ್ಧಿ ಹೇಳೆ ಗೋಪಿ ನಿನ್ನ ಮುದ್ದು ಕಂದಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 409.
2. **Note:** This song is not available in other standard books that I am referring.

ರಾಗ: ಪುನ್ನಾಗವರಾಳಿ ತಾಳ: ಅಟ

ಬುದ್ಧಿ ಹೇಳೆ ಗೋಪಿ ನಿನ್ನ ಮುದ್ದು ಕಂದಗೆ || ಪ ||
ಸದ್ದು ಮಾಡದ್ದಾಗೆ ಬಂದು ಮುದ್ದನಿಟ್ಟು ಪೋದನಮ್ಮ || ಅಪ ||

ಗಂಧ ಕಸ್ತೂರಿ ಪುನುಗು ಚಂದದಿಂದ ಪೂಸಿಕೊಂಡು
ಮಂದಹಾಸದಿಂದ ಬಂದ ಇಂದಿರೇಶನು
ಸಿಂಧುಶಯನ ತಾ ಬಂದು ಮಂದಿರದೊಳಗೆ ಪೊಕ್ಕು
ಸಂದುಗೊಂದುಗಳ ಹುಡುಕಿ ಸರಸವಾಡಿ ಪೋದನಮ್ಮ || 1 ||

ಚಪ್ಪರ ಮಂಚದ ಮೇಲೆ ತಪ್ಪಿ ನಾ ಮಲಗಿರೆ
ಸಪ್ಪಳವಾಗದ್ದಾಗೆ ಬಂದು ಅಪ್ಪಿಕೊಂಡನೆ
ಕುಪ್ಪಸದಲಿ ಕೈಯನಿಕ್ಕಿ ಕಕ್ಕಸ ಕುಚಗಳ ಪಿಡಿದು
ತಪ್ಪು ಕಾರ್ಯ ಮಾಡಿ ಅಧರ ಚಪ್ಪರಿಸಿ ಪೋದನಮ್ಮ || 2 ||

ಸುಳ್ಳು ಅಲ್ಲವೆ ನಮ್ಮ ಮಾತು ವಲ್ಲಭೆ ಕೇಳೆ ಗೋಪ್ಯಮ್ಮ
ಮೆಲ್ಲ ಮೆಲ್ಲನೆ ಬಂದು ತಾ ಗಲ್ಲಕೆ ಮುದ್ದನಿಟ್ಟು
ನಲ್ಲಳೆ ಬಾ ಎಂದು ಕರೆದು ಸೊಲ್ಲ ಸೊಲ್ಲ ಮಾತನಾಡಿ
ವಲ್ಲಭ ಶ್ರೀ ಪುರಂದರ ವಿಠಲ ಬುಲ್ಲಿ ತೋರಿ ಪೋದ || 3 ||

**Classification:** Keerthane
**Ankita:** sri purandara vittala
**Location:** NA
**Category:** Krishna Stuti
**Sub-Category:** Krishna, gopi, gandha, Kasturi, mancha, sullu,
**Pravachana:** NA
**Explanation:** NA